**CC. NO.05/2024**
<u>**ಪಿಡಬ್ಲ್ಯೂ:1**</u>

ದಿನಾಂಕಃ **08-05-2026** ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಎನ್. ಎನ್. ಟಿ ಪಿವಕೀಲರಿಂದಃ</u>

1. ನನಗೆ ಕಳೆದ 10-15 ವರ್ಷಗಳಿಂದ ಆರೋಪಿತನ ಪರಿಚಯವಿದೆ. ನಾನು ಹೊಲಸೆಲ್ ಕಿರಾಣಿ ಅಂಗಡಿ ನಡೆಸುತ್ತಿದ್ದೇನೆ. ಅದರ ಪರವಾನಿಗೆ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಮಾಡಿದ್ದೇನೆ. ನೀವು ಆ ರೀತಿ ದಾಖಲೆ ಹಾಜರು ಮಾಡಿಲ್ಲ ಎಂದರೆ ಸಾಕ್ಷಿ ನಾನು ಜಿ. ಎಸ್. ಟಿ ನೊಂದಣಿ ಮಾತ್ರ ಮಾಡಿಸಿದ್ದೇನೆ, ವ್ಯಾಪಾರ ಪರವಾನಿಗೆ ಪಡೆದುಕೊಂಡಿಲ್ಲ ಎಂದು ನುಡಿಯುತ್ತಾರೆ. ನಾನು ಪರವಾನಿಗೆ ಪತ್ರ ಪಡೆದುಕೊಂಡಿಲ್ಲ ಆದ್ದರಿಂದ ನನಗೆ ವ್ಯಾಪಾರ ಮಾಡುವ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ಆರೋಪಿಗೆ ಒಟ್ಟು ರೂ. 2,86,723/- ಮೊತ್ತದ ಸರಕು ನೀಡಿರುತ್ತೇನೆ. 5 ಬಿಲ್ ಗಳಲ್ಲಿ ಸದರಿ ಮೊತ್ತದ ಸರಕನ್ನು ಆರೋಪಿಗೆ ನೀಡಿದ್ದು ಸದರಿ ವ್ಯವಹಾರ ಸನಃ 2023 ರಲ್ಲಿ ಆಗಿರುತ್ತದೆ. ನಂತರ ಹಣ ಪಾವತಿ ಮಾಡುವಂತೆ ಕೇಳಿದಾಗ ಆರೋಪಿ ಸುಮಾರು 6 ತಿಂಗಳವರೆಗೆ ಮುಂದೂಡುತ್ತಾ ಹೋಗಿ ಆನಂತರ ಒಂದು ಚೆಕ್ಕನ್ನು ನೀಡಿದ್ದನು. ಆರೋಪಿಯೇ ಚೆಕ್ಕಿನ ವಿವರಗಳನ್ನು ಬರೆದು ನನಗೆ ಕೊಟ್ಟಿದ್ದನು. ನನಗೆ ಈಗ ಸದರಿ ಚೆಕ್ಕಿನ ನಂಬರ ನೆನಪಿಲ್ಲ. ಆರೋಪಿ ಚೆಕ್ಕಿನಲ್ಲಿ ಯಾವ ದಿನಾಂಕ ನಮೂದಿಸಿಕೊಟ್ಟಿದ್ದರು ಎಂದರೆ ಸಾಕ್ಷಿ ನನಗೆ ಈಗ ದಿನಾಂಕ ನೆನಪಿಲ್ಲ ಎಂದು ನುಡಿಯುತ್ತಾರೆ. ಆರೋಪಿ ಯಾವ ಖಾತೆಯ ಚೆಕ್ಕನ್ನು ನೀಡಿದ್ದರು ಎಂದರೆ ಸಾಕ್ಷಿ ಈಗ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಚೆಕ್ಕನ್ನು ಯಾವ ದಿನಾಂಕದಂದು ಬ್ಯಾಂಕಿಗೆ ಹಾಜರುಪಡಿಸಿದ್ದೇನು ಎಂಬುದು ಈಗ ನನಗೆ ನೆನಪಿಲ್ಲ. ಹಾಜರುಪಡಿಸಿದಾಗ ಚೆಕ್ಕ ಅಮಾನ್ಯಗೊಂಡಿರುತ್ತದೆ. ಅನಂತರ ವಕೀಲರ ಹತ್ತಿರ ಹೋಗಿ ಚೆಕ್ಕನ್ನು ಅವರಿಗೆ ನೀಡಿದ್ದೇನು. ಆರೋಪಿಗೆ ಯಾವ ದಿನಾಂಕದಂದು ವಕೀಲರ ಮೂಲಕ ನೋಟಿಸು ಕಳುಹಿಸಿದ್ದೀರಿ ಎಂದರೆ ಸಾಕ್ಷಿ ನನಗೆ ಈಗ ದಿನಾಂಕ ನೆನಪಿಲ್ಲ ಎಂದು ನುಡಿಯುತ್ತಾರೆ. ಸದರಿ ನೋಟಿಸಿನಲ್ಲಿ ನಮೂದಿಸಲಾಗಿದ್ದ ಅಂಶಗಳ ಬಗ್ಗೆ ನನಗೆ ಮಾಹಿತಿ ಇದೆ. ಆರೋಪಿ ಕೇವಲ ರೂ. 60,000/- ಬಾಕಿ ಹಣ ಪಾವತಿ ಮಾಡಬೇಕಾಗಿದ್ದು, ಆತ

ನನಗೆ ನೀಡಿದ ಖಾಲಿ ಚೆಕ್ಕನ್ನು ನಾನು ದುರೂಪಯೋಗ ಪಡಿಸಿಕೊಂಡು ಅದರಲ್ಲಿ ಹೆಚ್ಚಿನ ಮೊತ್ತ ನಮೂದಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ರ ಚೆಕ್ಕಿನಲ್ಲಿ ನನ್ನ ಹೆಸರು ಹಾಗೂ ಮೊತ್ತವನ್ನು ನಾನು ನಮೂದಿಸಿಕೊಂಡಿದ್ದೇನೆ ಮತ್ತು ಆರೋಪಿ ಸಹಿ ಮಾಡಿ ದಿನಾಂಕ ನಮೂದಿಸಿರುತ್ತಾರೆ. ನೀವು ಈ ಮೇಲೆ ಆರೋಪಿಯೇ ಚೆಕ್ಕನ್ನು ಬರೆದುಕೋಟ್ಟಿದ್ದರು ಎಂದು ನುಡಿದಿದ್ದು ಈಗ ಮೊತ್ತ ಹಾಗೂ ನನ್ನ ಹೆಸರನ್ನು ನಾನೇ ನಮೂದಿಸಿಕೊಂಡಿದ್ದೇನೆ ಎಂದು ನುಡಿದಿದ್ದು ಆ ಪೈಕಿ ಯಾವುದು ಸರಿ ಎಂದರೆ ಸಾಕ್ಷಿ ಮೊತ್ತ ಹಾಗೂ ನನ್ನ ಹೆಸರನ್ನು ನಾನು ನಮೂದಿಸಿಕೊಂಡಿದ್ದೇನೆ ಎಂಬುದು ಸರಿ ಇರುತ್ತದೆ ಎಂದು ನುಡಿಯುತ್ತಾರೆ. ಆರೋಪಿ ನಿಮಗೆ ಯಾವ ದಿನಾಂಕದಂದು ಚೆಕ್ಕ ನೀಡಿದ್ದರು ಎಂದರೆ ಸಾಕ್ಷಿ ನನಗೆ ಈಗ ದಿನಾಂಕ ನೆನಪಿಲ್ಲ ಎಂದು ನುಡಿಯುತ್ತಾರೆ. ಆರೋಪಿ ನಿಪಿ-1 ರ ಚೆಕ್ಕಿನಲ್ಲಿ ತನ್ನ ಸಹಿ ಮಾಡಿ ದಿನಾಂಕ ಮಾತ್ರ ನಮೂದಿಸಿ ನನಗೆ ಕೊಟ್ಟಿದ್ದರು ಎಂದರೆ ಸರಿ. ಬಾಕಿ ಮೊತ್ತ ಕೇವಲ ರೂ. 60,000/- ಇದ್ದರೂ ಸಹ ನಾನು ಆರೋಪಿ ನೀಡಿದ ಖಾಲಿ ಚೆಕ್ಕಿನಲ್ಲಿ ಹೆಚ್ಚಿನ ಮೊತ್ತ ನಮೂದಿಸಿಕೊಂಡು ಹಾಜರು ಮಾಡಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು ಯಾದಗಿರಿ